**ಸಹಕಾರ ಸಂಘಗಳ ನಿಬಂಧಕರ ಕಛೇರಿ**
**ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-5**

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು -52**

ಸಂಖ್ಯೆ: ಸಿಬ್ಬಂದಿ/12/ಇಸಿಎಸ್-2/2017-18 ದಿನಾಂಕ: 26-06-2019

**ವಿಷಯ:-** ಸಿವಿಲ್ ಅಪೀಲ್ ಸಂಖ್ಯೆ: 2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ: 10-05-2019 ರಂದು ಮಾನ್ಯ ಸರ್ವೋಚ್ಛ ನ್ಯಾಯಾಲಯ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸಹಕಾರ ಇಲಾಖೆಯ ಜಾರಿಗಾರರ ವೃಂದದ ದಿ:01-01-2019 ರಲ್ಲಿದ್ದಂತೆ ಪುನರಾವಲೋಕಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

**ಉಲ್ಲೇಖ:**

1. ಈ ಕಛೇರಿ ಅಧಿಸೂಚನೆ ಸಂಖ್ಯೆ: ಸಿಬ್ಬಂದಿ/12/ಇಸಿಎಸ್-2/2017-18, ದಿನಾಂಕ: 27-11-2017.
2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/186/ಎಸ್ಆರ್ಎಸ್/2018, ದಿನಾಂಕ:27-02-2019 ಹಾಗೂ 15-05-2019.
3. ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017.
4. ಈ ಕಛೇರಿ ಸಮ ಸಂಖ್ಯೆ: ಅಧಿಸೂಚನೆ ದಿನಾಂಕ:01-06-2019 ರ ಜಾರಿಗಾರರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ .

-o-

**-: ಅಧಿಸೂಚನೆ :-**

ಶ್ರೀ.ಬಿ.ಕೆ.ಪವಿತ್ರ ಮತ್ತು ಇತರರು //ವಿರುದ್ಧ// ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ: 09-02-2017 ರಂದು ನೀಡಿರುವ ತೀರ್ಪಿನನುಸಾರ ಸರ್ಕಾರದ ಎಲ್ಲಾ ಅಧಿಕಾರಿ ಮತ್ತು ನೌಕರರ ಜೇಷ್ಠತಾ ಪಟ್ಟಿಯನ್ನು ದಿನಾಂಕ: 27-04-1978 ರಿಂದ ಅನ್ವಯವಾಗುವಂತೆ ಪರಿಷ್ಕರಿಸುವಂತೆ ಸೂಚಿಸಿ, ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧರಣಾ ಅಧಿನಿಯಮ 2002 ರ ಪ್ರಕರಣ 3 ಮತ್ತು 4 ಪ್ರಕರಣಗಳನ್ನು ಅನೂರ್ಜಿತಗೊಳಿಸಿದ ಹಿನ್ನೆಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ವಿಭಾಗವು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಎಸ್ಆರ್ಆರ್ 2011, ದಿ: 06-05-2017 ರಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಅನುಸರಿಸಿರುವ ಬಗ್ಗೆ ಉಲ್ಲೇಖ (1) ರನ್ವಯ ಜಾರಿಗಾರರ ವೃಂದದ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಉಲ್ಲೇಖ (2) ಮತ್ತು (3)ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/186/ಎಸ್ಆರ್ಎಸ್/2018, ದಿನಾಂಕ:27-02-2019 ಹಾಗೂ 15-05-2019 ಗಳಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಈ ಕಛೇರಿಯ ಉಲ್ಲೇಖ (1)ರ ಅಧಿಸೂಚನೆಯನ್ವಯ ದಿನಾಂಕ:01-01-2017 ರಲ್ಲಿದ್ದಂತೆ ಸಹಕಾರ ಇಲಾಖೆಯ ಜಾರಿಗಾರರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ, ಜಾರಿಗಾರರ ವೃಂದದ ಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿಲ್ಲದೇ ಇರುವುದರಿಂದ, ದಿನಾಂಕ:01-01-2019 ರಲ್ಲಿದ್ದಂತೆ ನವೀಕರಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (4) ರನ್ವಯ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿಲ್ಲದ ಕಾರಣ ಜಾರಿಗಾರರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧದಲ್ಲಿರುವಂತೆ ಪ್ರಕಟಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಈ ಪಟ್ಟಿಯನ್ನು ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ನೌಕರರ ಗಮನಕ್ಕೆ ತರುವುದು ಹಾಗೂ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೆಳಕಂಡವರಿಗೆ ಇ ಮೇಲ್ ಮುಖಾಂತರ ಕಳುಹಿಸಲಾಗಿದೆ.

1. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ
3. ರಾಜ್ಯದ ಎಲ್ಲಾ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ
4. ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಗಣಕ ಕೋಶ) ರವರಿಗೆ ಕಳುಹಿಸುತ್ತಾ, ಜಾಲತಾಣದಲ್ಲಿ ಪ್ರಕಟಿಸಲು ಸೂಚಿಸಿದೆ.

**ಅನುಬಂಧ**

**ಸಿವಿಲ್ ಅಪೀಲ್ ಸಂ:2368/2011 ರ ಪ್ರಕರಣದಲ್ಲಿ ಮಾಣ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 10-05-2019 ರ ಆದೇಶದ ಹಿನ್ನೆಲೆಯಲ್ಲಿ ಅಧಿಸೂಚನೆ ಸಂಖ್ಯೆ ಸಿಬ್ಬಂದಿ/12/ಇಸಿಎಸ್-2/2017-18, ದಿನಾಂಕ:26-06-2019 ರನ್ವಯ ದಿನಾಂಕ: 01-01-2019 ರಲ್ಲಿದ್ದಂತೆ**

**ಅಟೆಂಡರ್/ಜಾರಿಗಾರರು ವೃಂದದ ಅಂತಿಮ ಜೇಷ್ಠತಾ ಪಟ್ಟಿ**

| ಕ್ರ ಸಂ. | ಹೆಸರು | ಪ.ಜಾ/ ಪ.ಪಂ | ಹುಟ್ಟಿದ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೇಮಕಾತಿ ದಿನಾಂಕ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | ನಾಗರಾಜ ಎಲ್ | | 04-01-54 | 05-02-79 | 05-02-79 | ನಿವೃತ್ತಿ |
| 2. | ವೆಂಕಟೇಶ್ ಎಂ. | | 22-07-50 | 10-06-68 | 25-10-91 | ನಿವೃತ್ತಿ |
| 3. | ಶಂಕರ್ ಜಿ. | | 30-12-73 | 04-08-93 | 02-08-93 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 4. | ಮರಿಗೌಡ ಎನ್. | | 25-02-68 | 28-11-94 | 24-11-94 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 5. | ವಾಗೀಶ್ ಪಿ.ಆರ್. | | 18-07-78 | 02-01-95 | 02-01-95 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 6. | ಕೆಂಪೇಗೌಡ | | 10-09-75 | 09-01-95 | 09-01-95 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 7. | ಗಂಗಾಧರ್ ಬಿ.ಎಸ್. | | 09-04-79 | 02-06-97 | 31-05-97 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 8. | ಪಾರ್ವತಿ ಡಿ. | | 01-01-80 | 04-05-98 | 04-04-98 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 9. | ಎಸ್.ನಾಗೇಶ್ | | 08-02-85 | 16-05-08 | 09-05-08 | |
| 10. | ಬಿ.ಭಾಗ್ಯ | ಪ.ಜಾ. | 01-03-71 | 26-08-09 | 20-08-09 | |
| 11. | ನರಸಿಂಗರಾವ್ | | 11-08-89 | 02-07-11 | 01-07-11 | ದ್ವಿ.ದ.ಸ.ವೃಂದಕ್ಕೆ ಬಡ್ತಿ ಹೊಂದಿರುತ್ತಾರೆ |
| 12. | ಮಹದೇವಸ್ವಾಮಿ | | 01-07-87 | 25-05-13 | 23-05-13 | |
| 13. | ಮಂಜುನಾಥ್ ಎಂ. | | 26-10-97 | 27-11-17 | 22-11-17 | |
| 14. | ಮಂಜುನಾಥ್ ಜಿ.ಪಿ. | | 03-10-87 | 04-10-18 | 03-10-18 | |

ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.